ಕಾಣಲು ಸಾಧ್ಯವೇ ಇಲ್ಲವೇನೊ. ಹುಡುಗನದು ಕಂದು ಬಣ್ಣ, ಸಾಧಾರಣ ಮೈಕಟ್ಟು. ಪೀಚು ಎಂದು ಹೇಳಲಾಗದಿದ್ದರೂ ತೆಳ್ಳಗಿನ ಪ್ರಕೃತಿ. ಹಾಗಾದರೆ ಬಾಲನ್ ಯಾರು... ಅವನ ಉದ್ಯೋಗ ಏನು... ಅವನಲ್ಲಿ ಏನು ಅಂತಹ ಆಕರ್ಷಣೆ ಅಂತ ಹೇಳಲೇಬೇಕಲ್ಲ... ಗಾಡಿಯಲ್ಲಿ ತರಕಾರಿ ಹಾಕಿಕೊಂಡು ಬಂದು, 'ಹುರಳಿಕಾಯಿ, ಹೀರೇಕಾಯಿ, ಟೊಮೆಟೊ, ಕೊತ್ತಂಬರಿ, ಕರಿಬೇವು,' ಅಂತ ಅವನದೇ ಧಾಟಿಯಲ್ಲಿ ಹೇಳಿಕೊಂಡು ಬರುತ್ತಾನೆ. ಅದೇನು ಸೆಳೆತ ಆ ದನಿಯಲ್ಲಿ... 'ಕೃಷ್ಣನ ಕೊಳಲಿನಾ ಕರೆ' ಎಂಬಂತಹ ವಿಶೇಷ ಅರ್ಥ ಕಲ್ಪಿಸಲಾಗದಿದ್ದರೂ ಆ ದನಿಗಾಗಿ ಕಾತರಿಸಿದವರಂತೆ ನಾವೆಲ್ಲರೂ ತರಕಾರಿ ಬುಟ್ಟಿಯೊಂದಿಗೆ ಹೊರಗೆ ಬರುವುದಂತೂ ನಿಜ.

ಹಾಂ! ಇವತ್ತು ನಮಗೆ ಬೇಕಾಗಿದ್ದುದು ಸಿಗಲಿಲ್ಲವೋ... 'ಇಲ್ಲ' ಎನ್ನುವ ಶಬ್ದವೇ ಅವನ ಬಾಯಲ್ಲಿ ಬಾರದು. 'ಹತ್ತು ಕೆ.ಜಿ ಹಾಕಿದ್ದೆ ಅಮ್ಮಾವರೆ... ಎಲ್ಲಾ ಖಾಲಿಯಾಗಿ ಹೋಯ್ತು. ನಾಳೆ ನಿಮ್ಗೇ ಅಂತ ಬೇರೆ ಮಡಿಕ್ಕಂಡು ಬರ್ತೀನಿ' ಎನ್ನುವ ಭರವಸೆ ಎಂದೂ ಹುಸಿಯಾಗುತ್ತಿರಲಿಲ್ಲ. 'ಯಾಕೆ ಬಾಲನ್... ಬದನೆಕಾಯಿಗೆ ಈ ಪಾಟಿ ದರ?' ಎಂದು ವಿಚಾರಿಸಿದರೆ, 'ಸಂತೆಯಿಂದ್ಲೇ ತಂದೆ ಅಮ್ಮಾವ್ರೆ... ಮಾರ್ಕೆಟ್‌ನಾಗೆ ಇನ್ನೂ ದರ ಅಂತೆ. ಮಳೆ ಕಡಿಮೆ ಅಲ್ಲವ್ರಾ... ಬೆಳೆ ಕಡಿಮೆ. ಮುಂದಿನ ವಾರದಾಗೆ ಕಡಿಮೆ ಆಗಬಹುದು' ಎಂದು ಸಂಕೋಚದಿಂದಲೇ ಹೇಳುವಾತ. ಅವನ ಹತ್ತಿರ ಚೌಕಾಶಿ ವ್ಯಾಪಾರ ನನಗಂತೂ ಹಿಡಿಸದು. ಅವನು ತರುವ ತರಕಾರಿ ಬಗ್ಗೆ ಏನೂ ಐಬು ಹೇಳೋ ಹಾಗೇ ಇಲ್ಲ. ಒಳ್ಳೆಯ ಗುಣಮಟ್ಟ. ಹೆಚ್ಚಿನ ಲಾಭದಾಸೆಯೂ ಇಲ್ಲ. ಈ ತರಕಾರಿ ವ್ಯಾಪಾರವೇ ಅವರ ಮನೆಗೆ ಆಧಾರವಾಗಿರುವಾಗ ಅವರ ಜೀವನವೂ ನಡೆಯಬೇಕಷ್ಟೆ.

ಹದಿಮೂರು–ಹದಿನಾಲ್ಕರ ವಯಸ್ಸಿನಿಂದಲೂ ತರಕಾರಿ ಮಾರಿಕೊಂಡು ಬರುತ್ತಿರುವ ಬಾಲನ್ ಬೆಳೆದು ಯುವಕನಾಗುತ್ತಿರುವುದೇ ನಮ್ಮ ಗಮನಕ್ಕೆ ಬಂದಿಲ್ಲ. ಕಂಡೂ ಕಾಣದಂತಹ ಚಿಗುರು ಮೀಸೆ ಅವನ ಯೌವನವನ್ನು ಸಾರಿ ಹೇಳುವಂತಿತ್ತು. ನಮ್ಮ ಎದುರು ಮನೆಯ ಪಕ್ಕದವರು, ಅವರ ಹೆಸರು ಹೇಳುವುದು ಬೇಡ ಬಿಡಿ... ಆಕೆ ತರಕಾರಿಗೆ ಬರುವಾಗ ಕೈಯಲ್ಲಿ ಒಂದು ಬುಟ್ಟಿ, ಹೋಗಲಿ ಒಂದು ಕವರ್ ಕೂಡಾ ಹಿಡಿದು ಬರುವುದಿಲ್ಲ. ಇರಲಿ... ಅವನ ಬುಟ್ಟಿಯಲ್ಲಿ ಕಾಯಿಪಲ್ಲೆ ತೆಗೆದುಕೊಂಡು ಒಳಗೆ ಹೋದವರು ಅದೇನು ಅಡಿಗೆಗೇ ಶುರು ಮಾಡಿಬಿಡುತ್ತಾರೆಯೇ ಎಂಬ ಗುಮಾನಿ... ಪಾಪ... ಬಾಲನ್ ಖಾಲಿ ಬುಟ್ಟಿಗಾಗಿ, ಕೊಂಡ ತರಕಾರಿ ಕಾಸಿಗಾಗಿ ನಿಂತಿರುತ್ತಾನೆ. ಆಕೆಯ ಈ ರೀತಿಗೆ ನಮಗೇ ಸಿಡುಕುವಂತಾಗುತ್ತದೆ. ಉಹುಂ... ಬಾಲನ್ ಕೋಪದ ಮಾತನಾಡಿದರೆ ಕೇಳಿ. 'ಒಬ್ಬೊಬ್ಬರು ಸ್ವಲ್ಪ ನಿಧಾನ... ಪಾಪ... ಅವರವರ ಸ್ವಭಾವ' ಎನ್ನುವಾಗ ಅವನ ಸಹನೆಯ ಬಗ್ಗೆ ಅಚ್ಚರಿಯಾಗುತ್ತದೆ. ನಾವೇ ಅವನ ಪರ ವಹಿಸಿ ಆಕೆಗೆ ಹೇಳಿದ್ದುಂಟು. 'ಹೀಗೆ ತಡ ಮಾಡಿದ್ರೆ ಪಾಪ... ಆ ಹುಡುಗ ಸಂಜೆ ವ್ಯಾಪಾರ ಇಲ್ಲದೆ ಮನೆಗೆ ಹೋಗ್ಬೇಕಾಗುತ್ತೆ.' ಆದರೂ ಅವರವರ ಅಭ್ಯಾಸಬಲವಲ್ಲವೆ... ಅವರು ಸುಧಾರಿಸಿಕೊಳ್ಳುವುದೂ ಇಲ್ಲ, ಬಾಲನ್ ಸಿಟ್ಟು ಮಾಡುವುದೂ ಇಲ್ಲ. ಸರಿಯಾದ ದರದಲ್ಲಿ ತರಕಾರಿ ಕೊಟ್ಟರೂ ಕೆಲವರ ಹುಟ್ಟುಗುಣವೆಂದು ಕಾಣುತ್ತದೆ... ಸ್ವಲ್ಪವಾದರೂ ಚೌಕಾಶಿ ಮಾಡದಿದ್ದರೆ ತಿಂದ ಅನ್ನ ಕರಗುವುದಿಲ್ಲವೇನೊ. ಸಣ್ಣದನಿಯಲ್ಲಿ 'ರೇಟ್ ಜಾಸ್ತಿ ಅಮ್ಮಾವ್ರೆ... ಗಿಟ್ಟಾಕಿಲ್ಲ' ಅಂತ ಬಾಲನ್ ಹೇಳಿದರೆ, ತರಕಾರಿಯನ್ನೇ ಒಂದಿಷ್ಟು ಕೊಸರು ಎಂದು ತಾವೇ ಗಾಡಿಯಿಂದ ನಿರ್ದಾಕ್ಷಿಣ್ಯವಾಗಿ ತೆಗೆದು ಹಾಕಿಕೊಳ್ಳುವಾಗಲೂ ಹಾಗೆಯೇ